# ಚಿತ್

**ಸ್ವಾಮಿ ಶಿವಾಕಾಂತಾನಂದ**

ವೇದಾಂತ ಎಂಬುದು ಒಂದು ಜೀವನಧರ್ಮವೂ ಹೌದು, ಸಾಕ್ಷಾತ್ಕಾರದ ಮಾರ್ಗವೂ ಹೌದು. ಎಲ್ಲಕ್ಕಿಂತ ಮಿಗಿಲಾಗಿ ಅದು ಅಧ್ಯಾತ್ಮವನ್ನು ತಾತ್ತ್ವಿಕವಾಗಿ ವಿವರಿಸುವ ಬೌದ್ಧಿಕ ಅನ್ವೇಷಣೆಯಾಗಿದೆ. ಭಗವಂತನ ಮೂಲ ಸ್ವರೂಪವೆಂದು ಪರಿಗಣಿಸಲಾದ ಚಿತ್ ಲಕ್ಷಣವನ್ನು ಇಲ್ಲಿ ವಿವರಿಸಿರುವ ಲೇಖಕರು ಕೇರಳದ ಕಾಲಡಿಯಲ್ಲಿರುವ ಶ್ರೀರಾಮಕೃಷ್ಣ ಅದ್ವೈತ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಲೇಖಕರು. ಇವರು ಬರೆದ ಹಲವು ಲೇಖನಗಳು ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಪಾರಮಾರ್ಥಿಕ ವಸ್ತುವಾದ ಪರಬ್ರಹ್ಮವು ಸತ್-ಚಿತ್-ಆನಂದ ಸ್ವರೂಪವಾಗಿದೆ. ಸಚ್ಚಿದಾನಂದವೇ ವೇದಾಂತದಲ್ಲಿ **ತತ್** ಎಂದು ಸಂಬೋಧಿಸಲ್ಪಡುವ ಆ ವಸ್ತುವಿನ ಲಕ್ಷಣ. **ಸತ್** ಎಂದರೆ ಎಲ್ಲ ಸದಸದ್ವಸ್ತುಗಳನ್ನು ಒಳಗೊಂಡ, ಸ್ವರೂಪತಃ ನಿತ್ಯವಾದ, ಸಂಪೂರ್ಣವಾದ, ಎಲ್ಲವನ್ನೂ ವ್ಯಾಪಿಸಿರುವ ಏಕೈಕ ವಸ್ತು. ಈ ಸದ್ವಸ್ತುವೇ **ಚಿತ್** ಆಗಿದೆ. **ಚಿತ್** ಎಂದರೆ ಜ್ಞಾನ. ಇದರ ಸ್ವಭಾವವೇನು? ಆನಂದ, ಎಂದರೆ ಸದಾನಂದ. ದುಃಖರಹಿತ ಸ್ಥಿತಿ. ಈ ಚಿದ್ವಿಚಾರವಾಗಿ ಸ್ವಲ್ಪ ವಿಮರ್ಶಿಸೋಣ. **ಚಿತ್** ಎಂದರೆ ಅನಂತ ಪ್ರಜ್ಞೆ, ಅನಂತ ಜ್ಞಾನ. ಎಲ್ಲವನ್ನೂ ಚೆನ್ನಾಗಿ ನೋಡುವ, ಬೆಳಗುವ ತಿಳಿಯುವ ಸಂವಿತ್. ಅವಿಕಾರ್ಯವಾದ ಚಿತ್ ಪ್ರಕೃತಿಯೊಡಗೂಡಿ ಚೈತನ್ಯವಾಗುತ್ತದೆ. ಶುದ್ಧಸಾಕ್ಷಿಚೈತನ್ಯವು ದೃಶಿ ಸ್ವರೂಪ. ಎಲ್ಲ ದೃಶ್ಯಗಳ ಜ್ಞಾನವನ್ನು ಸಂಪಾದಿಸುವ ಏಕೈಕ ವಸ್ತು. ಇದು ಜಾಗ್ರತ್ಸ್ವಪ್ನಾವಸ್ಥೆಯಲ್ಲಿ ಎಲ್ಲವನ್ನೂ ಅರಿತು, ಎಲ್ಲವನ್ನೂ ಅನುಭವಿಸಿದರೂ ಆಕಾಶದಂತೆ ನಿರ್ಲಿಪ್ತ, ವಿಕಾರರಹಿತ. ಈ ಚಿದಾತ್ಮಕವಾದ ವಸ್ತುವಿನಿಂದಲೇ ಪಾರಮಾರ್ಥಿಕ ಅಥವಾ ವ್ಯಾವಹಾರಿಕ ವಸ್ತುಜ್ಞಾನ, ಅನುಭವ, ಸಂವೇದನೆ ಉಂಟಾಗುತ್ತಿರುವುದು. **ಚಿತ್** ಅಭೇದ, ಮೇರೆಯಿಲ್ಲದ, ದೇಶ ಕಾಲಗಳ ಎಲ್ಲೆಯಿಲ್ಲದ, ಅನಂತವಾದ, ಎಲ್ಲವನ್ನೂ ಒಳಗೊಂಡ ಮತ್ತು ಎಲ್ಲವನ್ನೂ ಮೀರಿರುವ ವಸ್ತು. ಈ ಚಿತ್ಸಾಗರದಲ್ಲಿ ಅನೇಕ ಅಲೆಗಳಂತೆ ಬ್ರಹ್ಮಾಂಡಗಳು ಉದ್ಭವಿಸಿ, ಪರಿಣಮಿಸಿ, ಲಯವಾಗುತ್ತವೆ. ಅನಂತ ಚಿದಾಕಾಶವು ಎಲ್ಲ ಪರಿಣಾಮಗಳಿಗೆ ಅವಕಾಶ ನೀಡುತ್ತದೆ. ನಾವೆಲ್ಲರೂ ಅಜ್ಞಾನದಲ್ಲಿ ಇರುವುದರಿಂದ ನಮಗೆ ಎಲ್ಲ ಚರಾಚರ ವಸ್ತುಗಳಲ್ಲಿರುವ ಚಿದಾವಿರ್ಭಾವದ ಅನುಭವ ಉಂಟಾಗುವುದಿಲ್ಲ. ಶ್ರೀರಾಮಕೃಷ್ಣರಂತಹ ಜ್ಞಾನಿಗಳಿಗೆ ಸದಾ ಉಂಟಾಗುತ್ತಿರುತ್ತದೆ.

ದಾರ್ಶನಿಕ ಗ್ರಂಥಗಳಲ್ಲಿ ಅರಿವು (awareness), ಜ್ಞಾನ (knowledge), ವಸ್ತುಜ್ಞಾನ (cognition) ಮುಂತಾದವುಗಳ ಪ್ರಯೋಗಗಳನ್ನು ಕಾಣುತ್ತೇವೆ. ಈ ಎಲ್ಲವನ್ನೂ **ಚಿತ್** ಒಳಗೊಂಡಿದೆ. ಅದ್ವೈತ ವೇದಾಂತಿಗಳ ಪ್ರಕಾರ ಸತ್ತೇ ಚಿತ್ ಆಗಿರುವದರಿಂದ ಆತ್ಮವೇ ಜ್ಞಾನಸ್ವರೂಪ. ಎಲ್ಲ ಮಾನಸಿಕ ಭಾವನೆ, ವ್ಯಾವಹಾರಿಕ ಜಗತ್ತಿನ ಜ್ಞಾನ ಮತ್ತು ಪಾರಮಾರ್ಥಿಕ ಜ್ಞಾನ ಈ **ಚಿತ್ ಪರಿಣಾಮ**. 'ಮೋಟುಮರದಲ್ಲಿ ಪುರುಷ ನಿಶ್ಚಯವು'* ಎಂಬ ದೃಷ್ಟಾಂತ ಮಾತ್ರದಿಂದ ಮನುಷ್ಯನ ಧರ್ಮವು ಮೋಟುಮರದ್ದಾಗುವುದಿಲ್ಲ. ಮೋಟುಮರದ ಧರ್ಮವು ಮನುಷ್ಯನದೆಂದೂ ಆಗುವುದಿಲ್ಲ. ಹಾಗೆಯೇ ಚೈತನ್ಯದ ಧರ್ಮವು ದೇಹಾದಿಗಳದ್ದಲ್ಲ. ದೇಹಾದಿ ಧರ್ಮಗಳು ಚೈತನ್ಯದ್ದಾಗುವುದಿಲ್ಲ. ಹುಟ್ಟು-ಸಾವು, ಸುಖ-ದುಃಖ, ಲಾಭಾಲಾಭ ಮುಂತಾದವುಗಳು ಅವಿದ್ಯೆಯಿಂದ ಕಲ್ಪಿತವಾಗಿರುವುದರಿಂದ ಆತ್ಮನ ಧರ್ಮಗಳು ಎಂಬುದು ಯುಕ್ತವಾಗುವು

* ಮೋಟುಮರವನ್ನು ಕಂಡಾಗ ಅದು ಮನುಷ್ಯನೆಂಬ ಭ್ರಮೆ ಉಂಟಾಗು ವುದು. ಆದರೆ ಸತ್ಯ ತಿಳಿದ ನಂತರ ಅದು ಮರವೆಂಬ ಜ್ಞಾನ ಖಚಿತವಾಗಿ ನೆಲೆನಿಲ್ಲುವುದು. ಇದೇ ರೀತಿ ದೇಹ, ಇಂದ್ರಿಯ, ಮನಸ್ಸುಗಳೇ ತಾನೆಂದು ತಿಳಿದ ಮನುಷ್ಯನು ತನ್ನ ನೈಜಸ್ವರೂಪವಾದ ಆತ್ಮವನ್ನು ಅರಿಯುವುದಿಲ್ಲ. ಅದು ಅರಿವಾದೊಡನೆ ಅವನು ತಾನು ದೇಹ, ಮನಸ್ಸು ಇತ್ಯಾದಿಗಳೆಂಬ ಭ್ರಮೆಯನ್ನು ಹೊಂದುವುದಿಲ್ಲ. ಇದೇ ದೃಷ್ಟಾಂತ.

ದಿಲ್ಲ. ಆದ್ದರಿಂದಲೇ ಅಜ್ಞಾನವು ಅನ್ಯೋನ್ಯ ಅಧ್ಯಾಸನಿರಾಸದಿಂದ ನಿವಾರಣೆಯಾಗುತ್ತದೆ. ಎಲ್ಲಾ ಜ್ಞಾನಗಳ ಮೂಲ ಚಿದ್ವಸ್ತುವೇ. ಎಲ್ಲಾ ಜ್ಞಾನವೃತ್ತಗಳ ಏಕೈಕ ಕೇಂದ್ರಬಿಂದು – **ಚಿತ್.** ಈ ಜ್ಞಾನ ವೃತ್ತದ ಬೇರೆ ಬೇರೆ radiusನಲ್ಲಿ ನಿಂತು ಜ್ಞಾನದ ಅರಿವು, ನಿರ್ಧಾರ, ಮುಂತಾದ ವ್ಯಾಪಾರಗಳನ್ನು ಪುರುಷ ಮಾಡುತ್ತಾನೆ. ಒಬ್ಬನಿಗೆ ಅರಿವು ಹೇಗೆ ಆಗುವುದು? ಅವನಿಗೆ ಯಾವುದಾದರೂ ಉಪಕರಣ ಅಥವಾ ನಿರ್ದಿಷ್ಟವಾದ ವ್ಯವಸ್ಥೆಯ (instrument and structured system) ಮೂಲಕ 'ನಾನು ಇದ್ದೇನೆ', 'ನಾನು ವ್ಯವಹರಿಸುತ್ತಿದ್ದೇನೆ' ಎಂಬ ಜ್ಞಾನವಾಗುತ್ತದೆಯೆ? ಯಾವುದೇ ವಿಷಯ ವಸ್ತುಗಳ ಜ್ಞಾನವು ನಮಗೆ ಉಂಟಾದಾಗ, ನಮ್ಮ ನಿಜ ಸ್ವರೂಪಕ್ಕಿಂತ ಅನ್ಯವಾದದ್ದರ ಸಹಾಯದಿಂದ ಅರಿಯುತ್ತಿದ್ದೇವೆಯೆ? ಹಾಗೇನಾದರೂ ಆದಲ್ಲಿ ತನಗಿಂತ ಭಿನ್ನವಾದ ವಸ್ತುಗಳ ಸಹಾಯದಿಂದ ಜ್ಞಾನವಾಗುತ್ತಿದೆ ಎಂದಾಗುವುದು. ಹಾಗೆ ಉಂಟಾದ ಜ್ಞಾನವು ಆ ಉಪಕರಣದ, ವ್ಯವಸ್ಥೆಯ ಪ್ರಾಮಾಣಿಕತೆ, ಯೋಗ್ಯತೆ, ಸ್ವಾಮಿನಿಷ್ಠತೆಯನ್ನು (loyalty) ಅವಲಂಬಿಸಿರುತ್ತವೆ. ಅವುಗಳು ದೊರಯದಿರುವಾಗ ಮೂಢ ಸ್ಥಿತಿಯಲ್ಲಿ ತೊಳಲಾಡಬೇಕಾದ ಪರಿಸ್ಥಿತಿಯು ಉಂಟಾದೀತು. ಇವುಗಳು ತಂದೊಡ್ಡುವ ಜ್ಞಾನವನ್ನು ಪ್ರಮಾಣೀಕರಿಸಲು ಕೂಡ ಸಾಧ್ಯವಾಗದ ಸ್ಥಿತಿ ಉಂಟಾಗುವುದು. ಆಗ ಪ್ರತಿಬಿಂಬಿತ ಚೈತನ್ಯವು ಪರಾವಲಂಬ ಜೀವಿಯಂತೆ (parasite) ಅನ್ಯ ವಸ್ತುವನ್ನು ಅಸ್ತಿತ್ವಕ್ಕೆ ಅವಲಂಬಿಸಿದಂತಾಗುವುದು. ಎಲ್ಲಿ ಅವಲಂಬನೆಯೋ ಅಲ್ಲಿ ಅಭಯವೆಲ್ಲಿ, ಸ್ವಾತಂತ್ರ್ಯವೆಲ್ಲಿ! ಜ್ಞಾನವೆಂಬುದು ಸ್ವರೂಪವಾಗಿಲ್ಲದಿದ್ದಲ್ಲಿ ನಮಗೆ ಸಾಮಾನ್ಯ ಜ್ಞಾನವಾಗುವುದೂ ಇಲ್ಲ. **ದೃಕ್** ಆದ ನಮಗೂ ಆ **ದೃಶ್ಯ**ವಾದ ವಸ್ತುವಿಗೂ ಯಾವ ಅಸ್ತಿತ್ವವೂ ಇರುವುದಿಲ್ಲ. ಆದ್ದರಿಂದ ಅಸ್ತಿತ್ವ, ಜ್ಞಾನ, ಅಭಯ, ಮತ್ತು ಸ್ವಾತಂತ್ರ್ಯ ಎಲ್ಲವೂ ಒಂದಕ್ಕೊಂದು ಬೆಸೆದುಕೊಂಡಿರುವವು. ಇವುಗಳ ಸ್ವಭಾವವೇ ಆನಂದ. ಆದ್ದರಿಂದ ಪರಮಾರ್ಥತಃ ಜೀವನು ಆಗಲೇ ಎಲ್ಲ ಜ್ಞಾನವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಸಚ್ಚಿದಾನಂದನು. ಆದ್ದರಿಂದಲೇ ಭಗವದ್ಗೀತೆಯಲ್ಲಿ ನುಡಿದಿರುವುದು, **ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ–** 'ಜ್ಞಾನಕ್ಕಿಂತ ಪರಿಶುದ್ಧವಾದ ಅನ್ಯ ವಸ್ತುವಿಲ್ಲ' ಎಂದು.

ವೇದಾಂತಿಗಳ ಪ್ರಕಾರ ವ್ಯಾವಹಾರಿಕ ಜಗತ್ತಿನ ಜ್ಞಾನವು ಮಿಥ್ಯಾಜ್ಞಾನವಾದದ್ದರಿಂದ ವ್ಯಾವಹಾರಿಕ ಜಗತ್ತಿನಲ್ಲಿ ನಾವು ಪ್ರತಿ ಕ್ಷಣವೂ ತಿಳಿಯುವ ಘಟಾದಿ ಜ್ಞಾನವು ಅಪ್ರಾಮಾಣ್ಯವೇ, ಅಂದರೆ ಜ್ಞಾನವಲ್ಲವೇ ಎಂಬ ಪ್ರಶ್ನೆಯನ್ನು ಕೇಳಬಹುದು. ಸಿದ್ಧಾಂತಿಯ ಉತ್ತರವೇನೆಂದರೆ ಬ್ರಹ್ಮಸಾಕ್ಷಾತ್ಕಾರದ ನಂತರ ಮಾತ್ರ ಈ ಘಟ–ಪಟಾದಿ ಜ್ಞಾನವು ಬಾಧಿತವಾಗುತ್ತದೆ. **ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ।...** *(ಛಾಂ. ೬.೨.೧).* **ಸತ್** ಎಂದರೆ ಕೇವಲ ಇರುವುದು. ಸೂಕ್ಷ್ಮವೂ, ನಿರ್ವಿಶೇಷವೂ, ಸರ್ವಗತವೂ, ಒಂದೇ ಆದ, ಮತ್ತೊಂದಕ್ಕೆ ಅಂಟಿಲ್ಲದ, ಯಾವ ಅವಯವವೂ ಇಲ್ಲದ ವಸ್ತು. ಸರ್ವ ವೇದಾಂತಗಳಿಂದಲೂ ತಿಳಿದು ಬರುವ ಸಚ್ಚಿದಾನಂದ ವಸ್ತು. **ಯತ್ರ ಹಿ ದ್ವೈತಮಿವ ಭವತಿ ತದಿಹ ಇತರ ಇತರಮ್ ಪಶ್ಯತಿ... ವಿಜ್ಞಾತಾರಮರೇ ಕೇನ ಕಂ ವಿಜಾನೀಯಾದಿತಿ** *(ಬೃ. ೨.೪.೧೪)* **ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್ ಕೇನ ಕಂ ವಿಜಾನೀಯಾತ್** *(ಬೃ. ೪.೫.೧೫)* – ಇವುಗಳ ಹಿಂದಿನ ಶ್ಲೋಕಗಳಲ್ಲಿ ಯಾಜ್ಞವಲ್ಕ್ಯನು ಉದಾಹರಿಸುತ್ತಾನೆ. ಉಪ್ಪಿನ ಹರಳು (ಸೈಂಧವಘನ) ನೀರಿನಿಂದ ಹೊರಗಿದ್ದಾಗ ತನ್ನ ಆಕಾರವನ್ನು ಕಾಪಾಡಿಕೊಳ್ಳುವುದು. ತನ್ನ ಕಾರಣವಾದ ಸಮುದ್ರದ ನೀರಿನಲ್ಲಿ ಅದನ್ನು ಎಸೆದಾಗ ಗುರುತಿಲ್ಲದಂತೆ ಅದು ಕರಗಿ ಹೋಗುವುದು. ಈಗ ಎಂತಹ ಅನುಭವಿಯೂ ಆ ನೀರನ್ನು ಮತ್ತೆ ಅದೇ ಹರಳಿನ ಆಕಾರಕ್ಕೆ ತರಲಾರ. ಹಾಗೆಯೇ ಪರಮಾತ್ಮನಿಗಿಂತ ಬೇರೆಯಾದ ಭಾವವನ್ನು ಹೊಂದಿರುವ ಆತ್ಮನು *(ಬೃ. ೪.೫.೧೩)* ಉದಕ ಚಂದ್ರನಂತೆ (ನೀರಿನಲ್ಲಿರುವ ಚಂದ್ರನ ಪ್ರತಿಬಿಂಬ, ಚಂದ್ರನು ಅಲೆಗಳ ಜೊತೆ ಚಲಿಸಿದಂತೆ ಕಾಣುವಂತೆ) ನೋಡುವುದು, ಕೇಳುವುದು ಮುಂತಾದ ವ್ಯಾಪಾರಗಳನ್ನು ಮಾಡುತ್ತಾನೆ. ಈ ಅವಿದ್ಯಾ ಅವಸ್ಥೆಯಲ್ಲಿ ಕ್ರಿಯಾ–ಕಾರಕ ಫಲಗಳನ್ನು ಹೊಂದಿದವನಾಗಿರುತ್ತಾನೆ. ಯಾವಾಗ ಆತ್ಮನನ್ನು ಬಿಟ್ಟು ಬೇರೆ ಯಾವುದೂ ಇಲ್ಲವೆಂಬ ಜ್ಞಾನವಾಗುತ್ತದೊ ಆಗ ಯಾವ ವ್ಯಾಪಾರವೂ ಇರುವುದಿಲ್ಲ. ಹೀಗಾಗಿ ಜ್ಞಾನಿಗೆ ಕ್ರಿಯೆ ಕರಣಾದಿ ಕಾರಕಗಳು ಹೊಂದುವುದಿಲ್ಲ. ಸೈಂಧವಘನದಂತೆ **ಪ್ರಜ್ಞಾನಘನ**ನಾಗಿ ತನ್ನ ಸ್ವಜ್ಞಾನದಲ್ಲಿ ಅಚಲವಾಗಿ ನೆಲೆಗೊಂಡಿರುತ್ತಾನೆ.

ಕೇನೋಪನಿಷತ್ತಿನಲ್ಲಿ ಶಿಷ್ಯನು ಪ್ರಶ್ನಿಸುತ್ತಾನೆ: ''ಯಾರ ಇಚ್ಛೆಯಿಂದ ಮನಸ್ಸು ತನ್ನ ವಿಷಯಗಳೆಡೆಗೆ, ಪ್ರಾಣವು ತನ್ನ ವ್ಯಾಪಾರದೆಡೆಗೆ, ಕಣ್ಣು–ಕಿವಿಗಳು ದೃಶ್ಯ ಶ್ರಾವ್ಯವನ್ನು ಅನುಸರಿಸುತ್ತವೆ? ಯಾವ ಆ ಜ್ಯೋತಿರ್ಮಯನಾದ ದೇವನು ಇವುಗಳನ್ನು ಹೊರ ವಿಷಯಗಳಿಗೆ ಜೋಡಿಸುತ್ತಿರುವನು? ಅಂದರೆ ಮನಸ್ಸು ಮುಂತಾದ ಕರಣ ಸಮೂಹವನ್ನು ಯಾರು ಪ್ರೇರೇಪಿಸಿ ಕಳುಹಿಸುತ್ತಾರೆ?'' ಇಲ್ಲಿ ಅನೇಕ ವ್ಯಾಪಾರಗಳು ಯಾರೋ ಒಬ್ಬ ಅನ್ಯ ವ್ಯಕ್ತಿಗಾಗಿ ನಡೆಯಬೇಕು – ಎಂಬುದೇ ಜಿಜ್ಞಾಸೆ. ಸಾಂಖ್ಯರ ಪ್ರಸಿದ್ಧ ಯುಕ್ತಿ **ಸಂಘಾತ ಪರಾರ್ಥತ್ವಾತ್** – ಬೇರೆ ಬೇರೆ ವಸ್ತುಗಳ ಒಟ್ಟುಗೂಡುವಿಕೆಯು ಬೇರೊಂದರ, ಮತ್ತೊಬ್ಬನ ಭೋಗೋದ್ದೇಶಕ್ಕಾಗಿ ಎಂದು. ಹೇಗೆ ಮನೆಯಲ್ಲಿರುವ ವಿವಿಧ ವಸ್ತುಗಳು ಗೃಹಾಧಿಪತಿಯ ಉಪಯೋಗಕ್ಕಾಗಿಯೋ ಹಾಗೆಯೇ ಈ ದೇಹೇಂದ್ರಿಯಗಳಲ್ಲಿ ಮೇಲೆ ಹೇಳಿದ ಇಷ್ಟೊಂದು ಕಾರ್ಯಗಳು ಯಾರ ಇಚ್ಛೆಯಿಂದ, ಯಾರಿಗಾಗಿ, ಎಂಬರ್ಥದಲ್ಲಿ ಶಿಷ್ಯನ ಪ್ರಶ್ನೆ. ಅದಕ್ಕೆ ಗುರುವಿನ ಉತ್ತರ, ಶ್ರೋತ್ರ ಮುಂತಾದವುಗಳಿಗೆ ವಿಷಯವನ್ನು ತಿಳಿಸುವ ಸಾಮರ್ಥ್ಯವು ಚೈತನ್ಯ ರೂಪವೂ, ನಿತ್ಯವೂ, ಮತ್ತೊಂದರರೊಂದಿಗೆ ಸೇರಿಕೊಳ್ಳದೆ ಇರುವ, ಎಲ್ಲದಕ್ಕೂ ಒಳಗಿರುವ ಆತ್ಮಜ್ಯೋತಿಯಿಂದಲೇ ಉಂಟಾಗುತ್ತಿರುವುದು. ಆ ಚಿತ್ ಬೆಳಕಿನಿಂದಲೇ ಎಲ್ಲ ಅರಿಯುವಿಯುಕೆಯ ವ್ಯಾಪಾರವಾಗುತ್ತಿರುವುದು. **ಆತ್ಮನೈವಾಯಂ ಜ್ಯೋತಿಷಾಸ್ತೇ...** *(ಬೃ.೪.೩.೬)*, **ತಸ್ಯ ಭಾಸಾ ಸರ್ವಮಿದಂ ವಿಭಾತಿ** *(ಮುಂ. ೨.೨.೧೦)*, **ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾಮ್** *(ಕಠ ೨.೨.೧೩)*, **ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಂ** *(ಗೀ. ೧೫.೧೨)*, **ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ** *(ಗೀ. ೧೩.೩೩)* ಮುಂತಾದ ಶ್ರುತಿ ಸ್ಮೃತಿ ವಾಕ್ಯಗಳು ಇದಕ್ಕೆ

ಪ್ರಮಾಣ. ಜ್ಞಾನಿಗಳ ಬುದ್ಧಿಗೆ ಮಾತ್ರ ಗೋಚರವಾಗಿಯೂ, ಎಲ್ಲಕ್ಕಿಂತಲೂ ಒಳಗಿರುವ ಕೂಟಸ್ಥವಾದ ಶ್ರೋತ್ರಾದಿಗಳಿಗೂ ಶ್ರೋತ್ರವಾಗಿದ್ದುಕೊಂಡು ಅವುಗಳ ಸಾಮರ್ಥ್ಯಕ್ಕೂ ನಿಮಿತ್ತವಾಗಿರುವ ಆ ಆತ್ಮವೇ ಎಲ್ಲವನ್ನೂ ಅರಿಯುತ್ತಿರುವ ಚಿತ್ಸ್ವರೂಪ. ಆದರೆ ಮನಸ್ಸು, ಶ್ರೋತ್ರ ಚಕ್ಷುರಾದಿಗಳು ಈ ಆತ್ಮನ ಬಳಿಗೆ ಹೋಗಲಾರವು. ಅಂದರೆ ಇವುಗಳಿಗೆ ಆತ್ಮನನ್ನು ವಿಷಯವನ್ನಾಗಿ ಮಾಡಿಕೊಳ್ಳುವ, ಅದನ್ನು ಅರಿಯುವ ಸಾಮರ್ಥ್ಯವಿಲ್ಲ. ಸೂರ್ಯನಿಂದ ಪಂಜನ್ನೋ, ಹಣತೆಯನ್ನೋ ಪ್ರಕಾಶಿಸಬಹುದು. ಆದರೆ ಇವುಗಳಿಗೆ ಸೂರ್ಯನನ್ನು ಬೆಳಗುವ ಸಾಮರ್ಥ್ಯವಿರುವುದಿಲ್ಲ.

ಹೀಗೆಂದ ಮಾತ್ರಕ್ಕೆ ಸಂಸಾರ ದಶೆಯಲ್ಲಿ ವ್ಯಾವಹಾರಿಕ ಅರಿಯುವಿಕೆಯು ಬಾಧಿತವಾಗುವುದಿಲ್ಲ. ಎಲ್ಲ ಪರಿಮಿತ ಜ್ಞಾನವೂ ಸಹ ಚಿತ್‌ನ ಆಭಾಸವಾದ ಚೈತನ್ಯದ ಮೂಲಕವೇ ಉಂಟಾಗುತ್ತದೆ. ಚೈತನ್ಯವು ಅನಾದಿಯಾಗಿದ್ದರೂ ಅದಕ್ಕೆ ಅನಿತ್ಯವಾದ ಚಕ್ಷುರಾದಿ ಕರಣಗಳು ಜ್ಞಾನಸಾಧನವಾಗುವುದು ಹೇಗೆ? **ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ** *(ಬೃ. ೨.೪.೧೪).* ಎಲ್ಲಿಯವರೆಗೂ ಒಂದಲ್ಲ, ಎರಡು ಮತ್ತು ಇನ್ನಷ್ಟು ಎಂಬ ಅಂತಃಕರಣ ಸ್ಥಿತಿ ನಮಗೆ ಇದೆಯೋ ಆಗ ಇನ್ನೊಂದು ವಸ್ತುವನ್ನು ತಿಳಿಯುವ ವ್ಯಾಪಾರವು ಇದ್ದೇ ಇರುತ್ತದೆ. ಚೈತನ್ಯವು ಅನಾದಿಯಾಗಿದ್ದರೂ ಅದನ್ನು ವ್ಯಕ್ತಪಡಿಸುವ ಅಂತಃಕರಣ ವೃತ್ತಿಯು ಇಂದ್ರಿಯಸನ್ನಿಕರ್ಷದ ಮೂಲಕ **ಅರಿಯುವುದು** ಎಂಬ ಪರಿಚ್ಛಿನ್ನ ಜ್ಞಾನವನ್ನು ಉಂಟುಮಾಡುತ್ತದೆ. ಈ ವಿಶಿಷ್ಟ ಚೈತನ್ಯವು (ಚಿದಾಭಾಸ) ವೃತ್ತಿಜ್ಞಾನೋತ್ಪತ್ತಿಯನ್ನು ಉಂಟುಮಾಡಲೋಸುಗವೋ ಎಂಬಂತೆ ಪರಿಚ್ಛಿನ್ನತೆಯನ್ನು ಹೊಂದುತ್ತದೆ. ಇದನ್ನೇ ವಿವರಣ ಶಾಖೆಯ ಮೂಲಪುರುಷರಾದ, ಪಂಚಪಾದಿಕಕಾರರಾದ ಪದ್ಮಪಾದರು **ಅಂತಃಕರಣವೃತ್ತೌ ಜ್ಞಾನತ್ವೋಪಚಾರಾತ್** ಎಂದು ತಿಳಿಸಿದ್ದಾರೆ. ಇಂತಹ ಸ್ಥಿತಿಯಲ್ಲಿ ಹೇಗೆ ಸಾಮಾನ್ಯ ಇಂದ್ರಿಯಜ್ಞಾನವು ನಮಗೆ ಉಂಟಾಗುತ್ತದೆ ಎಂಬುದನ್ನು *'ವೇದಾಂತ ಪರಿಭಾಷಾ'* ಕರ್ತೃವಾದ ಧರ್ಮರಾಜ ಅಧ್ವರೀಂದ್ರರು ಉತ್ತರಿಸುತ್ತಾರೆ. ಸಾಮಾನ್ಯವಿಷಯಜ್ಞಾನವು ನಮಗೆ ಈ ಕ್ರಮದಿಂದ ಉಂಟಾಗುತ್ತಿದೆ. ಹೇಗೆ ಕೆರೆಯ ನೀರು ತೂಬಿನಿಂದ ಹೊರಬಂದು ಕಾಲುವೆಯ ಮೂಲಕ ಹರಿದು ಹೊಲ ಮುಂತಾದವುಗಳನ್ನು ಪ್ರವೇಶಿಸಿ ಗೋಲಾಕಾರ, ಚತುಷ್ಕೋಣಾಕಾರ, ನಕ್ಷತ್ರಾಕಾರ ಮುಂತಾದ ಹಳ್ಳಗಳ ಆಕಾರವನ್ನು ಹೊಂದುವುದೋ ಹಾಗೆಯೇ ಚೈತನ್ಯಜ್ಯೋತಿಯಿಂದ ಯುಕ್ತವಾದ ಅಂತಃಕರಣವು ಚಕ್ಷುರಾದಿಗಳ ಮೂಲಕ ಹೊರಬಂದು ಮಡಕೆ ಮುಂತಾದ ಆಕಾರವಾಗಿ ಪರಿಣಾಮ ಹೊಂದುತ್ತದೆ. ಈ ಪರಿಣಾಮವೇ ಯೋಗವು ತಿಳಿಸುವ ಅಂತಃಕರಣವೃತ್ತಿ. ಅನುಮಾನ ಮತ್ತು ಸ್ವಪ್ನಗಳ ಜ್ಞಾನವಾಗುವಾಗ ಇಂದ್ರಿಯಗಳ ಬಹಿರ್ವ್ಯಾಪಾರವಿಲ್ಲದೆ ಅಂತರ್ವೃತ್ತಿಯಿಂದ ಜ್ಞಾನಾನುಭವವುಂಟಾಗುತ್ತದೆ. ಇದೇ ಕ್ರಮದಲ್ಲಿ ಎಲ್ಲಾ ವಸ್ತುಗಳ ಆಲೋಚನೆಗಳಿಂದ ಉಂಟಾಗುವ ಜ್ಞಾನವು ಅಂತಃಕರಣದಲ್ಲಿ ಚೈತನ್ಯಜ್ಯೋತಿಯ ಪ್ರತಿಬಿಂಬದಿಂದ ಎಡೆಬಿಡದೆ ನಡೆಯುತ್ತದೆ. ಹಾಗೆಯೇ ಸುಖ-ದುಃಖಾದಿ ವೃತ್ತಿಗಳು ಮನಸ್ಸಿನಲ್ಲಿ ಉಂಟಾದಾಗ ಚೈತನ್ಯವು ಆಯಾ ಭಾವನೆಗಳಿಂದ ನಿಯಮಿತವಾಗಿ 'ನಾನು ಸುಖಿ' 'ನಾನು ದುಃಖಿ' ಎಂಬ ಜ್ಞಾನವಾಗುತ್ತದೆ. ಚೈತನ್ಯವು ವ್ಯಾವಹಾರಿಕ ಜಗತ್ತಿನ ಅರಿಯುವಿಕೆಯಲ್ಲಿ ನಿಯಮಿತವಾದಾಗ (limited) ನಾನಾ ಜ್ಞಾನವು ಉಂಟಾಗುತ್ತದೆ. ಸತ್ತ್ವಗುಣವು ಪ್ರಕಾಶಕ, ಅದರಿಂದ ನಮಗೆ ಪರಿಪೂರ್ಣವಾದ ಜ್ಞಾನ ಉಂಟಾಗುವುದು. ಯಾವಾಗ ಸತ್ತ್ವಗುಣವು, ರಜಸ್ಸು ಮತ್ತು ತಮೋಗುಣಗಳೊಡನೆ ಸಮ್ಮಿಶ್ರಣವಾಗುವುದೋ ಆಗ ಚಿತ್ತವು ಮಲಿನಗೊಂಡು ಕರ್ಮ ಮತ್ತು ಅಜ್ಞಾನವನ್ನು ಜೀವನಿಗೆ ಉಂಟುಮಾಡುತ್ತದೆ. ಸತ್ತ್ವ, ರಜಸ್ಸು ಮತ್ತು ತಮೋಗುಣಗಳ ಪ್ರಮಾಣಾನುಸಾರ ನಮ್ಮ ಆತ್ಮಜ್ಞಾನ ಪ್ರಮಾಣ ನಿಂತಿದೆ. ದ್ವೈತವು ನಾಶವಾದಾಗ ಚಿದೇಕಜ್ಞಾನವು ಉಂಟಾಗುತ್ತದೆ. ಒಟ್ಟಿನಲ್ಲಿ ಇಂದ್ರಿಯಗಳ ಸಂಯೋಗದ ಮೂಲಕ ಉಂಟಾದ ಜ್ಞಾನವಾಗಲೀ, ಶುಕ್ತಿ - ರಜತ ಮುಂತಾದ ಮಿಥ್ಯಾಜ್ಞಾನವಾಗಲೀ ಮತ್ತು ಅವುಗಳ ಮೂಲಕ ಗೋಚರವಾದ ವಸ್ತುಗಳಾಗಲೀ ಈ ಎರಡಕ್ಕೂ ಚೈತನ್ಯದ ಹೊರತು ಬೇರೆ ಅಸ್ತಿತ್ವವಿಲ್ಲ. ಅಖಂಡವಾದ ಚಿದ್ವಸ್ತುವು ವಿಷಯಿಯಾದ ಜೀವಾತ್ಮನ ಅಂತಃಕರಣದಿಂದ ನಿಯಮಿತವಾಗಿ ವಿವಿಧ ವಸ್ತುಗಳನ್ನು ತನ್ನ ಮೇಲೆಯೇ ಆರೋಪಿಸುವ ಮೂಲಕ ಅರಿಯುತ್ತಾನೆ.

**ಘಟಾವಭಾಸಕೋ ದೀಪೋ ಘಟಾದನ್ಯೋ ಯಥೇಷ್ಯತೇ।**
**ದೇಹಾವಭಾಸಕೋ ದೇಹೀ ತಥಾಽಹಂ ಬೋಧವಿಗ್ರಹಃ॥**

*(ವಾಕ್ಯವೃತ್ತಿ, ೨೩)*

ಮಡಕೆಯನ್ನು ಬೆಳಗುವ ದೀಪವು ಮಡಕೆಗಿಂತ ಬೇರೆ. ಹಾಗೆಯೇ ನಮ್ಮ ಸೂಕ್ಷ್ಮ-ಸ್ಥೂಲ ಆತ್ಮನು ದೇಹ ಮತ್ತು ಎಲ್ಲಾ ವಸ್ತುಗಳನ್ನು ತೋರಿಸಿಕೊಡುತ್ತಿರುವ, ದೀಪದಂತೆ ದೇಹಕ್ಕಿಂತ ಬೇರೆಯಾದ ಚೈತನ್ಯಸ್ವರೂಪನು.

ಇನ್ನು ವ್ಯಕ್ತವಾದ ಜಗತ್ತಿಗೆ ಬಂದರೆ ಸತ್ ವಸ್ತುವು ಎಲ್ಲವೂ ಆಗಿದೆ. ಸತ್- ಚಿತ್ ಎರಡು ಬ್ರಹ್ಮನ ಕಾರ್ಯವಾದರೆ, ಆನಂದವು ಅವನ ಸ್ವರೂಪ. ಚಿತ್-ವಸ್ತುವು ಎಲ್ಲವನ್ನೂ ವರಾಹನಂತೆ ಎತ್ತಿಹಿಡಿದಿರುವ, ಎಲ್ಲದರಲ್ಲಿಯೂ ಶಕ್ತಿಯನ್ನು ಪ್ರವಹಿಸುತ್ತಿರುವ, ಎಲ್ಲ ವಸ್ತುಗಳನ್ನೂ ಬೆಳಗುವ, ಎಲ್ಲ ವಸ್ತುಗಳಿಗೂ ಕಾರಣವಾದ ಮೂಲೈಕ ವಸ್ತು. ಮಣ್ಣು, ಕಲ್ಲು, ಲೋಹ ಮುಂತಾದ ಜಡ ವಸ್ತುಗಳಲ್ಲಿ ಚಿತ್ ವಸ್ತುವು ಅತ್ಯಂತ ತಮೋಗುಣಾವೃತವಾಗಿರುವುದರಿಂದ ಅತ್ಯಲ್ಪವಾಗಿ ಪ್ರಕಟವಾಗುತ್ತದೆ. ಸ್ವಶಕ್ತಿಯಿಂದ ಚಲಿಸಲೂ ಸಾಧ್ಯವಿಲ್ಲದ ಸ್ಥಿತಿಯಲ್ಲಿ ನಿಶ್ಚೇತನವಾದ ವಸ್ತುವಿನಂತೆ ಬಿದ್ದುಕೊಂಡಿರುತ್ತವೆ. ಸಸ್ಯಗಳಲ್ಲಿ ಚಟುವಟಿಕೆಯನ್ನೂ, ಬೆಳವಣಿಗೆಯನ್ನೂ, ಇಬ್ಬನಿ ಬೀಳುವಾಗ, ಸೂರ್ಯೋದಯದಲ್ಲಿ, ಮೊಗ್ಗು ಅರಳುವುದು ಮುಂತಾದ ಪ್ರಕೃತಿಯ ಕ್ರಿಯೆಗಳಲ್ಲಿ ಚಿತ್ತಿನ ಸ್ಪಂದನವನ್ನೂ ಕಾಣಬಹುದು. ಇಲ್ಲಿ ಚೇತನವು ಸಾಧಾರಣವಾಗಿ ಪ್ರಕಟವಾಗಿದೆ. ಪ್ರಾಣಿಗಳಲ್ಲಿ ಚಲನೆ, ಪ್ರಚೋದನೆ ಮತ್ತು ಪ್ರತಿಕ್ರಿಯೆ (stimulus and response), ಸ್ಮೃತಿ, ಭಾವನೆಗಳು, ಮೂಲಪ್ರವೃತ್ತಿ (instinct), ಅಸ್ತಿತ್ವ ಹೋರಾಟ, ಬುದ್ಧಿಶಕ್ತಿ ಇವುಗಳನ್ನು ಕಾಣಬಹುದು. ಆದರೆ ಮನುಷ್ಯನಲ್ಲಿ ಮಾತ್ರ ಚೈತನ್ಯವು ಪ್ರಬುದ್ಧವಾಗಿ ಆವಿರ್ಭಾವವಾಗುತ್ತದೆ. ಈ ಮನುಷ್ಯನು ಸೃಷ್ಟಿಯ ತುತ್ತತುದಿಯಲ್ಲೂ , ಚಿತ್ಸಾಗರ

ದಡದಲ್ಲಿಯೂ ನಿಲ್ಲಬಲ್ಲ ಏಕೈಕ ಸೃಷ್ಟಿಯಾಗಿದ್ದಾನೆ. ಆದ್ದರಿಂದಲೇ *ವಿವೇಕಚೂಡಾಮಣಿ* ಯ ಪ್ರಥಮ ಶ್ಲೋಕದಲ್ಲಿಯೇ ಶಂಕರರು 'ಮಾನುಷ ಜನ್ಮವು ಅತ್ಯಂತ ದುರ್ಲಭ' ವೆಂದು ಹೇಳಿರುವುದು:

**(ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಮ್।**
**ಮನುಷ್ಯತ್ವಂ ಮುಮುಕ್ಷತ್ವಂ ಮಹಾ ಪುರುಷ ಸಂಶ್ರಯಃ ।।)**

**ಚಿತ್** ಎಂಬುದನ್ನು ಎರಡು ರೀತಿಯಲ್ಲಿ ಮಾತ್ರ ಅರಿಯಲು ಸಾಧ್ಯ. ಒಂದು, ಅದರ ಪರಿಣಾಮವಾದ ಈ ಸೃಷ್ಟಿಯನ್ನು ಅರಿಯುವುದರ ಮೂಲಕ. ಎರಡು, ಅದನ್ನು ಅಧ್ಯಾತ್ಮ ಸಾಧನದ ಧ್ಯೇಯವಸ್ತುವಾಗಿಟ್ಟುಕೊಂಡು ತಿಳಿಯುವ ಮೂಲಕ. ಪ್ರತಿಯೊಂದು ರಾಸಾಯನಿಕ ವಸ್ತುವಿನಲ್ಲಿರುವ ಶಕ್ತಿ ಮತ್ತು ಎಲೆಕ್ಟ್ರೋ-ಮ್ಯಾಗ್ನೆಟಿಕ್ ತರಂಗಗಳು ಅವುಗಳಲ್ಲಿರುವ ಚೈತನ್ಯದ ಪ್ರತೀಕ. ''ನೀವು ಈ ವಿಶ್ವದ ಹಿಂದಿರುವ ರಹಸ್ಯವನ್ನು ತಿಳಿಯಬೇಕಾದಲ್ಲಿ ಶಕ್ತಿ, ತರಂಗ, ಕಂಪನ ಮುಂತಾದ ವಿಷಯಗಳ ಮೂಲಕ ಆಲೋಚಿಸಿರಿ'' ಎಂದು ನಿಕೋಲ ಟೆಸ್ಲ ಹೇಳುತ್ತಾನೆ ('' if you want to find the secrets of the universe, think in terms of energy, frequency and vibration'' – *Nikola Tesla.*) ಸಂವೇದನೆ, ಭಾವನೆ, ಅರಿಯುವ ಮತ್ತು ಆಲೋಚಿಸುವ ಮೌಲ್ಯಗಳಿಂದ ಚಿತ್ ಆವಿರ್ಭಾವವನ್ನು ಇದುವರೆಗೂ ವಿಮರ್ಶಿಸಿದೆವು. ಆದರೆ ನಾವು ಚೆನ್ನಾಗಿ ಅರಿತುಕೊಳ್ಳಬೇಕು, ಇವುಗಳಾವುದೂ ಚಿತ್ ಸ್ವರೂಪದ ಗುರುತಲ್ಲ, ಇವುಗಳಾವುವೂ ನಿತ್ಯ, ಅವಿಕಾರ್ಯ, ಕಾರಣವಾದ ಚಿದ್ವಸ್ತುವನ್ನು ವ್ಯಕ್ತಪಡಿಸಲಾರವು. ಇವೆಲ್ಲವೂ ಆ ದಿಗಂಬರ ಚಿದ್ವಸ್ತುವಿನ ಮಾಯಾ ವಸ್ತ್ರಾಭರಣ. ಶ್ರೀರಾಮಕೃಷ್ಣರಂತಹ ಕೆಲವರಿಗೆ ಈ ಜ್ಞಾನವು ಉನ್ನತ ನಿರ್ವಿಕಲ್ಪ ಸಮಾಧಿಯ ಅನುಭವದಲ್ಲಿ ಆಗುವುದು. ಈ ಅವಸ್ಥೆಯು ಎಲ್ಲ ಆಲೋಚನೆಯನ್ನು ಬಿಟ್ಟನಂತರ ಉಳಿಯುವ ಸತ್ಯ. *(ವರಾಹೋಪನಿಷದ್, ಅ. ೪)*

ಈ ಜಗತ್ತು ಅಸತ್ತು, ಜಡ ಮತ್ತು ದುಃಖಮಯವಾದದ್ದು, ಆದರೆ ಬ್ರಹ್ಮ ಸಚ್ಚಿದಾನಂದ ವಸ್ತು. ಅಧ್ಯಾಸದಿಂದ ಬ್ರಹ್ಮನು ಜೀವನಾಗಿ ವ್ಯವಹರಿಸುತ್ತಾನೆ. ಅದನ್ನು ಬಿಟ್ಟು ಸಚ್ಚಿದಾನಂದ ಸಾಗರದಲ್ಲಿ ಮುಳುಗಿರುವ ಮೀನಾಗಬೇಕು. ಹಾಗೆಯೇ ಶಂಕರರು ಸಹ ಸಾರಿದ್ದಾರೆ: '**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ.**' ಈ ಬ್ರಹ್ಮವು ಸಚ್ಚಿದಾನಂದವೆಂಬ ತ್ರಿಪುಟಿಗಳ (ಮೂರು) ಸಮ್ಮಿಲನ. ಬ್ರಹ್ಮವು ಚಿತ್ ಮತ್ತು ಶಕ್ತಿ. ಈ ಚಿದಂಶವು ಒಂದೇ ಆಗಿದ್ದರೂ ಅನೇಕ ಕನ್ನಡಿಗಳಲ್ಲಿ ಸೂರ್ಯನ ಬೆಳಕು ಪ್ರತಿಬಿಂಬಿಸುವಂತೆ ಅನೇಕ ಜೀವಗಳಲ್ಲಿ ಬೆಳಗಿದಾಗ ಅನೇಕ ಚಿದ್ರೂಪಗಳು ಉಂಟಾಗುತ್ತವೆ. ಈ ಚಿತ್ ಎಲ್ಲ ವಸ್ತುಗಳನ್ನೂ ಬೆಳಗಿ ಜೀವನಿಗೆ ಜ್ಞಾನವನ್ನು ಉಂಟುಮಾಡುತ್ತದೆ. ಪರಮಾತ್ಮನು ಕೂಟಸ್ಥನೂ, ಅಸಂಗನೂ, ಚಿದ್ರೂಪನೂ ಆಗಿದ್ದಾನೆ. ಆದರೆ ದೇಹೇಂದ್ರಿಯಾದಿ ಅನ್ಯೋನ್ಯ ಅಧ್ಯಾಸದಿಂದ ಅವನು ಪುರುಷನೆನಿಸಿಕೊಳ್ಳುತ್ತಾನೆ. ಇವನೇ ಚಿದಾಭಾಸನು. ಇವನಿಗೆ ಚಿತ್ಸ್ವರೂಪನಾದ ಭಗವಂತನೇ ಅಧಿಷ್ಠಾನ, ಆಧಾರ.

ಈ ಪುರುಷನು ಅಥವಾ ಜೀವನು ಸದಾ ಚೈತನ್ಯದೊಡನೆ ಯುಕ್ತವಾಗಿದ್ದರೂ ಚಿದಾಭಾಸನೊಡನೆ ಕೂಡಿದ ಸ್ಥೂಲಸೂಕ್ಷ್ಮ ಶರೀರಗಳನ್ನು ತನ್ನ ಸ್ವರೂಪವಾಗಿ ಸ್ವೀಕರಿಸಿ, 'ನಾನು ಸಂಸಾರಿ' ಎಂದು ಅಭಿಮಾನವನ್ನು ಹೊಂದುತ್ತಾನೆ. ಈ ಭ್ರಮೆಯನ್ನು ತಿರಸ್ಕರಿಸಿ ಕೂಟಸ್ಥಚೈತನ್ಯವನ್ನು ತನ್ನ ಸ್ವರೂಪವಾಗಿ ಯಾವಾಗ ಸ್ವೀಕರಿಸುವನೋ ಆಗ 'ನಾನು ಚಿತ್ಸ್ವರೂಪನಾಗಿದ್ದೇನೆ' ಎಂದು ಅರಿಯುತ್ತಾನೆ. 'ನಾನು ಅಸಂಗನು, ಚಿತ್ಸ್ವರೂಪನು' ಎಂಬ ವೈದಿಕ ವ್ಯವಹಾರದಿಂದ ಚಿದಾಭಾಸ ವಿಲಕ್ಷಣವಾದ ವಿಜ್ಞಾನ ಉಂಟಾಗುತ್ತದೆ.

ಮಾಯೆಯು ತನ್ನಲ್ಲಾಗುವ ಚಿದಾಭಾಸದಿಂದ ಜೀವೇಶ್ವರರನ್ನು ಕಲ್ಪಿಸುತ್ತದೆ. ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮದ ಪ್ರತಿಬಿಂಬದೊಡನೆ ಕೂಡಿದ ಪ್ರಕೃತಿಯೇ ಇಲ್ಲಿ ಮಾಯೆ ಎನಿಸಿದೆ: **ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ** *(ಛಾಂ. ೬.೩.೩)* **ಅನೇನ ಜೀವೇನ ಆತ್ಮನಾನುಪ್ರವಿಶ್ಯ** *(ಛಾಂ. ೬.೩.೨).* ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮದ ಮಾಯೆಯೇ ಈ ಪ್ರಕೃತಿ. ಮಾಯೆಯಿಂದ ಜಗತ್ತೆಲ್ಲವೂ ಕಲ್ಪಿತವಾಗಿದೆ. ಈ ಸತ್ತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯೇ ಜಗತ್ತಿಗೆ ಉಪಾದಾನ ಕಾರಣ. ಈ ಮಾಯೆಯು ತನ್ನಲ್ಲಾಗುವ ಚಿದಾಭಾಸದಿಂದ ಜೀವೇಶ್ವರರನ್ನು ಕಲ್ಪಿಸುತ್ತದೆ. ಜೀವೇಶ್ವರರಿಬ್ಬರೂ ಕಲ್ಪಿತರೇ ಆಗಿರುವರು. ಅವರಿಬ್ಬರಿಂದ ಜಗತ್ತೆಲ್ಲವೂ ಕಲ್ಪಿತವಾಗಿದೆ. ಕೂಟಸ್ಥನೂ ಅಸಂಗನೂ ಚಿದ್ರೂಪನೂ ಆದ ಪರಮಾತ್ಮನು ದೇಹೇಂದ್ರಿಯಾದಿಗಳ ಅಧ್ಯಾಸಕ್ಕೆ ಅಧಿಷ್ಠಾನವಾಗಿರುವನು. ಪಾರಮಾರ್ಥಿಕ ಸಂಬಂಧ ರಹಿತವಾದ ಅಂತಃಕರಣದಲ್ಲಿ ಈ ಚಿದ್ರೂಪನು ವರ್ತಿಸುವುದರಿಂದ, ಜೀವಭಾವವನ್ನು ಹೊಂದಿದವನಾಗಿ ಪುರುಷನೆನಿಸುವನು. ಚಿದಾಭಾಸನಾದ ಜೀವನಿಗೆ ಅಧಿಷ್ಠಾನವು ಕೂಟಸ್ಥಚೈತನ್ಯವೇ. ಕೂಟಸ್ಥಚೈತನ್ಯನ ಮೇಲೆ ಅಧ್ಯಾರೋಪವಾದ ಚಿದಾಭಾಸನೇ ಜೀವ-ಜಗತ್ತಾಗಿದ್ದಾನೆ. ಸ್ಥೂಲ-ಸೂಕ್ಷ್ಮ ಶರೀರಗಳನ್ನು ತನ್ನ ಸ್ವರೂಪವಾಗಿ ಸ್ವೀಕರಿಸಿ, 'ನಾನು ಸಂಸಾರಿ' ಎಂದು ಅಭಿಮಾನವನ್ನು ಪಡುತ್ತಾನೆ. ಭ್ರಮಾರೂಪವಾದ ಹಾವು, ಹಗ್ಗವೆಂಬ ಅಧಿಷ್ಠಾನವಿಲ್ಲದೆ ಹೇಗೆ ಉಂಟಾಗುವುದಿಲ್ಲವೋ ಹಾಗೆಯೇ ಆಧಾರಭೂತನಾದ ಕೂಟಸ್ಥನನ್ನು ಬಿಟ್ಟು ಚಿದಾಭಾಸನೊಬ್ಬನೇ ಇರಲಾರನು. ಈ ಕಲ್ಪಿತನಾದ ಜೀವನಿಗೆ ಸಂಸಾರ ಮೋಕ್ಷಗಳು ಸಿದ್ಧಿಸಲು ಚೈತನ್ಯವನ್ನು ಗ್ರಹಿಸಬೇಕು. ಈ ಸೂಕ್ಷ್ಮ-ಸ್ಥೂಲ ದೇಹದ್ವಯಸಹಿತವಾದ ಚಿದಾಭಾಸನನ್ನು ತಿರಸ್ಕರಿಸಿ, ಕೂಟಸ್ಥ ಚೈತನ್ಯವನ್ನು ತನ್ನ ನಿಜಸ್ವರೂಪವಾಗಿ ಯಾವಾಗ ಸ್ವೀಕರಿಸುವನೋ ಆಗ 'ನಾನು ಚಿದಾತ್ಮನಾಗಿದ್ದೇನೆ, ನಾನು ಅಸಂಗನಾಗಿದ್ದೇನೆ' ಎಂದು ಅರಿಯುತ್ತಾನೆ. ಮುಮುಕ್ಷುವೂ ಪಂಡಿತನೂ ಆದವನು ವೇದಾಂತ ಶ್ರವಣದಿಂದ ಉತ್ಪನ್ನವಾದ ಜ್ಞಾನದಿಂದ 'ನಾನು ಅಸಂಗನು, ನಾನು ಚಿತ್ಸ್ವರೂಪನು' ಎಂಬ ವೈದಿಕವಾಕ್ಯಗಳ ವಿಚಾರ ಮಾಡಿ, ಚಿದಾಭಾಸದಿಂದ ಚೈತನ್ಯವನ್ನು ವಿಂಗಡಿಸಿದಾಗ ಜ್ಞಾನವು ಉಂಟಾಗುವುದು. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವನ್ನು ತಿರಸ್ಕರಿಸಿದಾಗ ಉಳಿಯುವ ನಿಜವಾದ ವ್ಯಕ್ತಿಯಂತೆ, ಮಿಥ್ಯೆಯಾದ ಚಿದಾಭಾಸನನ್ನು ತಿರಸ್ಕರಿಸಿದಾಗ ಕೂಟಸ್ಥಚೈತನ್ಯವು ಮಾತ್ರ ಉಳಿಯುತ್ತದೆ. ಕೂಟಸ್ಥ ಚೈತನ್ಯವೇ ಚಿದಾಭಾಸನ ನಿಜಸ್ವರೂಪವಾದ್ದರಿಂದ ಪುರುಷಶಬ್ದದಿಂದ ಹೇಳಲ್ಪಟ್ಟ ಕೂಟಸ್ಥಸಹಿತನಾದ ಚಿದಾಭಾಸನು ಮಿಥ್ಯಾರೂಪದಿಂದ ತನ್ನನ್ನು ವಿಂಗಡಿಸಿ 'ನಾನು ಕೂಟಸ್ಥನು' ಎಂದು ಅರಿಯಲು ಸಮರ್ಥನಾಗು

ವನು. ಈ ಜೀವಾವಸ್ಥೆ ಮತ್ತು ಜಗತ್ತು ಎಲ್ಲವೂ ತೋರ್ಕೆಯದಾಗಿದ್ದರಿಂದ, ಅಜ್ಞಾನದಿಂದ ಜ್ಞಾನದೆಡೆಗೆ ಪಯಣಿಸಿದಾಗ ಚಿತ್ಸ್ವರೂಪ ಪ್ರಾಪ್ತಿಯಾಗುವುದು ಎಂದು ಹೇಳಬಹುದು. ಆದ್ದರಿಂದ ನಮಗೆ ಸಂಶಯವುಂಟಾಗಬೇಕು – 'ನಾನು ಸಪ್ತಧಾತುಗಳ ಸ್ಥೂಲ ದೇಹವೆ? ಅಂತಃಕರಣವುಳ್ಳ ಸೂಕ್ಷ್ಮಶರೀರವೆ?' – ಎಂದು. ಲೌಕಿಕರಿಗೆ 'ಈ ದೇಹವೇ ನಾನು' ಎಂಬ ಸಂಶಯ–ವಿಪರ್ಯಯ–ರಹಿತವಾದ ಜ್ಞಾನವಿರುತ್ತದೆ. ಇಂತಹ ಅತ್ಯಂತ ಜಡ ಸ್ಥಿತಿಯಲ್ಲಿ ಜ್ಞಾನಾಭ್ಯಾಸ ಸಾಧ್ಯವಿಲ್ಲ. ಅಂತಹವರು ದಕ್ಷಿಣೇಶ್ವರದ ತಮ್ಮ ಕೊಠಡಿಯಲ್ಲಿ ಬಂದು ಕುಳಿತರೆ ಶ್ರೀರಾಮಕೃಷ್ಣರು, 'ರಾಸಮಣಿಯ ಉದ್ಯಾನವನ, ದೇವಸ್ಥಾನಗಳನ್ನು ನೋಡಿ ಬನ್ನಿರಿ' ಎಂದು ಉಪದೇಶವೀಯದೆ ಕಳಿಸಿಬಿಡುತ್ತಿದ್ದರು.

ಶ್ರೀರಾಮಕೃಷ್ಣರಿಗೆ ಜಗನ್ಮಾತೆಯು ಮೂರು ಬಾರಿ ''ಭಾವಮುಖದಲ್ಲಿರು'' ಎಂದು ಆದೇಶವಿತ್ತಳು. ಚೈತನ್ಯಮಯಿಯಾದ ಎಲ್ಲ ಚೇತನಾಚೇತನ ವಸ್ತುಗಳನ್ನು ಬೆಳಗುತ್ತಿರುವ ಜಗನ್ಮಾತೆಯೇ ಇಲ್ಲಿ ಅವರಿಗೆ ಆದೇಶವೀಯುತ್ತಿದ್ದಾಳೆ, 'ಭಾವಮುಖದಲ್ಲಿರು' ಎಂದು. ಈ 'ಭಾವಮುಖ'ವೆಂದರೇನು ಎಂದು ಸ್ವಾಮಿ ಶಾರದಾನಂದರು *ಶ್ರೀರಾಮಕೃಷ್ಣ ಲೀಲಾಪ್ರಸಂಗ*ದಲ್ಲಿ ಪರಾಮರ್ಶಿಸಿದ್ದಾರೆ. ಎಲ್ಲಿಯವರೆಗೂ ನಮಗೆ ಅಹಂಬೋಧೆಯಿದೆಯೋ ಅಲ್ಲಿಯವರೆಗೂ, ವಿಶ್ವಬೋಧೆ ಉಂಟಾಗುವುದಿಲ್ಲ. ವಿಶ್ವಾಹಂತತ್ತ್ವವೇ ಜಗನ್ಮಾತೆಯ ಅಥವಾ ಈಶ್ವರನ ಅಹಂಭಾವ. ಕ್ಷುದ್ರ ಅಹಂಭಾವವನ್ನು ಸಂಪೂರ್ಣವಾಗಿ ಲಯಗೊಳಿಸಿಕೊಂಡ ಶ್ರೀರಾಮಕೃಷ್ಣರಲ್ಲಿ ವಿಶ್ವಮನಸ್ಸಿನ ಭಾವತರಂಗಗಳು ಉದ್ಭವಿಸಿ, ಕ್ರೀಡಿಸಿ, ಲಯವಾಗುತ್ತಿದ್ದವು. ವಿಶ್ವಚೈತನ್ಯ, ವಿಶ್ವಶಕ್ತಿಯ ಪ್ರತ್ಯಕ್ಷ ಅನುಭವವನ್ನು ಅವರು ಪಡೆದರು. ಆ ವಿಶ್ವಶಕ್ತಿಯನ್ನೇ ಅವರು 'ಕೃಪಾಮಯಿ ಜಗಜ್ಜನನಿ' ಎಂದು ಕರೆದರು. ನಿರ್ಗುಣ ಮತ್ತು ಸಗುಣಗಳ ಮಧ್ಯದಲ್ಲಿ ಯಾವ ಈ ವಿಶ್ವ ಅಹಂತತ್ತ್ವವಿದೆಯೋ ಅದೇ ಭಾವಮುಖ. ಶ್ರೀರಾಮಕೃಷ್ಣರಿಗೆ ಅಹಂಬೋಧೆಯು ಯಾವಾಗ ಹೊರಟುಹೋಗುತ್ತಿತ್ತೋ ಆಗ ಅವರು ನಿರ್ಗುಣ ಬ್ರಹ್ಮಭಾವದಲ್ಲಿ ಇರುತ್ತಿದ್ದರು. ಯಾವಾಗ ಅವರಿಗೆ ಸ್ವಲ್ಪ ಅಹಂಬೋಧೆ ಇರುತ್ತಿತ್ತೋ ಆಗ 'ಸಗುಣ ವಿರಾಟ್ ಮತ್ತು ಅದರ ಒಳಗಿರುವ ಅನಂತ ಭಾವತರಂಗಗಳು ಶ್ರೀ ಜಗನ್ಮಾತೆಯ ನಿರ್ಗುಣಭಾವದೊಡನೆಯೇ ಒಂದಾಗಿವೆ' ಎಂದು ಅನುಭವಿಸುತ್ತಿದ್ದರು. ಇಡೀ ಭೂತ–ವರ್ತಮಾನ–ಭವಿಷ್ಯದ ಸಮಸ್ತ ಬೋಧೆಯೂ ಅವರಿಗೆ ಆಗುತ್ತಿತ್ತು. ಇದು ಸಗುಣ ನಿರ್ಗುಣಗಳೆರಡನ್ನೂ ಒಳಗೊಂಡ ಸಂಪೂರ್ಣ ಜ್ಞಾನಾವಸ್ಥೆ. ಈ ಅವಸ್ಥೆಯಲ್ಲಿ ಚಿಚ್ಛಕ್ತಿಯೂ ಜ್ಞಾನಮಯಿಯೂ ಆದ ಚೇತನಳಾದ ಜಗನ್ಮಾತೆಯೇ ಜಡವಸ್ತುಗಳಲ್ಲಿರುವ ಜ್ವಾಲಾಮುಖಿ ಮುಂತಾದ ಶಕ್ತಿಯೂ, ಜಡಶಕ್ತಿಗಳ ಆತ್ಮವೂ ಆಗಿದ್ದಾಳೆಂಬ ಅರಿವುಂಟಾಗುತ್ತದೆ. (**'ಚಿಚ್ಛಕ್ತಿಶ್ಚೇತನಾರೂಪಾ ಜಡಶಕ್ತಿರ್ಜಡಾತ್ಮಿಕಾ।'** *ಲಲಿತಾಸಹಸ್ರನಾಮ, ೯೦*). ಈ ಚಿನ್ಮಯವಾದ ಭಾವಮುಖದ ಸ್ಥಿತಿಯಲ್ಲಿ ಮಹಡಿ ಮೆಟ್ಟಲನ್ನು ಹತ್ತಿ ಇಳಿದು ಮಾಡುವ ಬಾಲಕನಂತೆ, ಸಗುಣ–ನಿರ್ಗುಣವೆಂಬೆರಡು ದಡಗಳಿರುವ ಚಿತ್ಸರೋವರದ ಮೀನಿನಂತೆ ಶ್ರೀರಾಮಕೃಷ್ಣರು ವಿಹರಿಸುತ್ತಿದ್ದರು.

**ವಿಜ್ಞಾನಮಾನಂದಂ ಬ್ರಹ್ಮ** *(ಬೃ. ೩.೯.೨೮)* – ಯಾವುದು ಎಲ್ಲವೂ ತಾನೇ ಆಗಿರುವುದೋ, ಸರ್ವಭೂತಗಳ ಹೃದಯ ಗುಹೆಯಲ್ಲಿರುವುದೋ, ಸರ್ವವಿಷಯಗಳ ಅತೀತವಾಗಿರುವುದೂ, ಆನಂದವೂ ಆಗಿದೆಯೋ ಆ ಚಿತ್ ತತ್ತ್ವಕ್ಕೆ ನಮಸ್ಕಾರ.

**ಓಂಕಾರವೇದ್ಯಃ ಪುರುಷಃ ಪುರಾಣೋ**
**ಬುದ್ಧೇಶ್ಚ ಸಾಕ್ಷೀ ನಿಖಿಲಸ್ಯ ಜಂತೋಃ।**
**ಯೋ ವೇತ್ತಿ ಸರ್ವಂ ನ ಚ ಯಸ್ಯ ವೇತ್ತಾ**
**ಪರಾತ್ಮರೂಪೋ ಭುವಿ ರಾಮಕೃಷ್ಣಃ॥**

*(ಶ್ರೀರಾಮಕೃಷ್ಣಸ್ತವರಾಜ, ೧)*

ಇಂತಹ ಬುದ್ಧಿಸಾಕ್ಷಿಯಾದ, ಯಾವ ಚಿದ್ವಸ್ತುವನ್ನು ಶಾಸ್ತ್ರಗಳು 'ಅವಾಙ್ಮಾನಸ ಗೋಚರಮ್', ಮಾತು–ಮನಸ್ಸುಗಳಿಗೆ ನಿಲುಕದ್ದೆಂದು ಸಾರಿರುವುದನ್ನೇ ಗೋಷ್ಪದೀಕರಿಸಿದರೋ ಅಂತಹ ಶ್ರೀರಾಮಕೃಷ್ಣರಿಗೆ ನಮಸ್ಕಾರ.

## ಸ್ವಾಮಿ ಸುಬೋಧಾನಂದರ ವಿಶಿಷ್ಟ ಅನುಭವ

ಪರಿವ್ರಾಜಕ ಜೀವನದ ಕಾಲದಲ್ಲಿ ಸುಬೋಧಾನಂದರು ಕೆಲವೊಮ್ಮೆ ದಾರಿ ಪಕ್ಕದ ಮರದ ಕೆಳಗೆ ನಿದ್ರಿಸುತ್ತಿದ್ದರು. ಭೂಮಿಯೇ ಹಾಸಿಗೆ, ಕೈತೋಳೇ ತಲೆದಿಂಬು. ಬಿಹಾರ ಅಥವಾ ಉತ್ತರಪ್ರದೇಶದ ಮೂಲಕ ಹೋಗುತ್ತಿದ್ದಾಗಿನ ಒಂದು ಅನುಭವವನ್ನು ಅವರು ವಿವರಿಸಿದ್ದಾರೆ: ''ಒಮ್ಮೆ ನಾನು ಪ್ರಯಾಣಮಾಡುತ್ತ ರಾತ್ರಿ ಒಂದು ಆಲದ ಮರದ ಕೆಳಗೆ ಮಲಗಿದ್ದೆ. ಸ್ವಲ್ಪ ಹೊತ್ತಾದ ಮೇಲೆ ನನಗೊಂದು ಕನಸಾಯಿತು. ವೃದ್ಧೆಯೊಬ್ಬಳು, 'ಎದ್ದೇಳು. ನಿನ್ನಿಂದಾಗಿ ಇಲ್ಲಿರುವ ಹಾವುಗಳು ತಮ್ಮ ಬಿಲಗಳಿಂದ ಹೊರಬರಲು ಆಗುತ್ತಿಲ್ಲ. ಸ್ವಲ್ಪ ಮುಂದೆ ಹೋದರೆ ಒಂದು ಪೋಲಿಸ್ ಸ್ಟೇಷನ್ ಸಿಗುತ್ತದೆ. ಅಲ್ಲಿ ನೀನು ರಾತ್ರಿಯನ್ನು ಕಳೆಯಬಹುದು' ಎಂದಂತಾಯಿತು. 'ನನಗೆ ಅಲ್ಲಿರುವುದಕ್ಕೆ ಬಿಡುತ್ತಾರೆಯೆ?' ಎಂದು ನಾನು ಕೇಳಿದೆ. ಅವಳು, 'ಹೌದು, ಅಲ್ಲಿ ಮಲಗಲು ಅವಕಾಶ ಕೊಡುತ್ತಾರೆ. ನೀನು ಬಾಗಿಲು ತಟ್ಟಿದಾಗ ಯಾರು ಎಂದು ಕೇಳುತ್ತಾರೆ. ನಾನೊಬ್ಬ ಸಾಧು ಎಂದು ನೀನು ಹೇಳು' ಎಂದಂತಾಯಿತು. ನನಗೆ ಎಚ್ಚರವಾಯಿತು. ಆ ಮುದುಕಿ ಹೇಳಿದಂತೆಯೇ ಮಾಡಿದೆ. ಪೋಲಿಸ್ ಸ್ಟೇಷನ್ ವರಾಂಡದಲ್ಲಿ ನನಗೆ ಜಾಗ ದೊರೆಯಿತು. ಮಾರನೆಯ ಬೆಳಗ್ಗೆ ಆ ಆಲದ ಮರದ ಬಳಿ ಹೋಗಿ ನೋಡಿದರೆ, ಅನೇಕ ಹಾವಿನ ಬಿಲಗಳು ಕಾಣಿಸಿದವು. ಸ್ಥಳೀಯ ಜನರು ಅಲ್ಲಿ ತುಂಬ ನಾಗರಹಾವುಗಳಿವೆ ಎಂದು ಹೇಳಿದರು. 'ಯಾರು ಆ ವೃದ್ಧೆ?' ಎಂದು ಯಾರೋ ಕೇಳಿದ್ದಕ್ಕೆ ನಾನು ಸ್ವಲ್ಪ ಹೊತ್ತು ಸುಮ್ಮನಿದ್ದು, ಬಳಿಕ 'ಅವಳೇ ಜಗನ್ಮಾತೆ' ಎಂದೆ.''

*(**'ದೇವರೊಡನೆ ಬಾಳಿದವರು'** ಭಾಗ ೧, ಪು.೬೩೬, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆ)*